ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ಹನೂರು ತಾಲ್ಲೂಕು ಕಾಡಂಚಿನ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಕುರಿತು

ಶ್ರೀ ಎಸ್.ನಾಗರಾಜ್ (ಸಂದೇಶ್‌ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

503(360) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳಾದ ಅಲಗುಮೂಲೆ, ಕೆ.ಗುಂಡಾಪುರ, ಕಾಂಚಿಳ್ಳಿ, ಜಲ್ಲಿಪಾಳ್ಯ,ಗೋಪಿನಾಥ, ಗೂಳ್ಯ, ಚಂಗವಾಡಿ, ನಂಜೇ ಒಡೆಯರ ದೊಡ್ಡಿ, ನಾಗನತ್ತ, ಭೈರನತ್ತ, ತೋಮಿಯರ್ ಪಾಳ್ಯ, ದಿನ್ನಳ್ಳಿ, ಮೀಣ್ಯಂ, ಅರಬಗೆರೆ, ಕುರಟ್ಟಿ ಹೊಸೂರು, ಕೆಂಪಯ್ಯನ ಹಳ್ಳಿ, ಸತ್ತಾರ್ ಮೇಡು ಮೊದಲಾದ ಗ್ರಾಮಗಳಿಗೆ ಸೂಕ್ತ ಸಾರಿಗೆ ಬಸ್ ಸೌಲಭ್ಯ ಇಲ್ಲದೆ, ಗ್ರಾಮಸ್ಥರಿಗೆ ತೀವ್ರ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೊರೊನಾ ಲಾಕ್‌ಡೌನ್ ಪರಿಸ್ಥಿತಿಯ ನಂತರ ಈ ಗ್ರಾಮಗಳಿಗೆ ಬಸ್‌ಗಳು ಸಂಚರಿಸದೆ ಇರುವುದರಿಂದ ಗ್ರಾಮೀಣ ಜನರು ಗೂಡ್ಸ್ ಟೆಂಪೋ, ಪ್ಯಾಸೆಂಜರ್ ಆಟೋಗಳನ್ನು ಪ್ರಯಾಣಕ್ಕೆ ಆಶ್ರಯಿಸಬೇಕಾಗಿ ಬಂದಿದ್ದು, ಅಪಾಯಕಾರಿ ಪರಿಸ್ಥಿತಿಯಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಕಾಡಂಚಿನ ಗ್ರಾಮಗಳ ಜನರ ಅನುಕೂಲಕ್ಕೆ ತಕ್ಕಂತೆ ಸಾರಿಗೆ ಬಸ್‌ಗಳು ಸಂಚರಿಸುವಂತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?